# ಚಾಮುಂಡೇಶ್ವರಿ ವಿದ್ಯುತ್ ಸರಬರಾಜು ನಿಗಮ ನಿಯಮಿತ

(ಕರ್ನಾಟಕ ಸರ್ಕಾರದ ಸ್ವಾಮ್ಯಕ್ಕೆ ಒಳಪಟ್ಟಿದೆ)


ನೋಂದಾಯಿತ ಕೇಂದ್ರ ಕಛೇರಿ ವಿಳಾಸ
ನಂ.29, ವಿಜಯನಗರ, 2ನೇ ಹಂತ,
ಹಿನಕಲ್ ಮೈಸೂರು-570017
ನೋಂದಾಯಿತ ವೆಬ್ ಸೈಟ್ ವಿಳಾಸ-
WWW.cescmysore.org
ಇಮೇಲ್ : gmcescmysore@gmail.com
CIN U40109KA2004SGC035177

ಕಾರ್ಯನಿರ್ವಾಹಕ ಇಂಜಿನಿಯರ್(ವಿ),
ನಗರ ವಿಭಾಗ,
ಮಳವಳ್ಳಿ
ದೂರವಾಣಿ ಸಂಖ್ಯೆ: 08231-24[illegible]
ಮೊಬೈಲ್ ಸಂಖ್ಯೆ: +91-944[illegible]
ಇ-ಮೇಲ್: aeemalavalli1@cescmysore.org


ಕ್ರಮಾಂಕ: ಕಾನಿಇಂ(ವಿ)/ಸಕಾ(ತಾಂ)/ [illegible] /2019-20/ 1814-21    ದಿನಾಂಕ: 8 JUL 2019

## -: ಸಭಾ ನಡವಳಿ :-

ದಿನಾಂಕ:- 14-06-2019 ರಂದು ಮಾನ್ಯ ಪ್ರಭಾರ ಅಧೀಕ್ಷಕ ಇಂಜಿನಿಯರ್(ವಿ), ವೃತ್ತ ಕಛೇರಿ, ಸೆಸ್ಕ್, ಮಂಡ್ಯ ರವರ ಅಧ್ಯಕ್ಷತೆಯಲ್ಲಿ, ಮಳವಳ್ಳಿ ನಗರ ಉಪವಿಭಾಗದ ಆವರಣದಲ್ಲಿ ನಡೆದ ಜನ ಸಂಪರ್ಕ ಸಭೆಯ ಸಭಾ ನಡವಳಿ.

**ಹಾಜರಿದ್ದ ಅಧಿಕಾರಿಗಳು/ಸಿಬ್ಬಂದಿ ವರ್ಗದವರು**

1) ಶ್ರೀಮತಿ. ಶೈಲಜಾ.ಎಸ್.ಎನ್ : ಪ್ರಭಾರ ಅಧೀಕ್ಷಕ ಇಂಜಿನಿಯರ್(ವಿ), ವೃತ್ತ ಕಛೇರಿ, ಸೆಸ್ಕ್, ಮಂಡ್ಯ
2) ಶ್ರೀ.ಮೋಹನ್ : ಪ್ರಭಾರ ಕಾರ್ಯನಿರ್ವಾಹಕ ಇಂಜಿನಿಯರ್(ವಿ),ವಿಭಾಗ ಕಛೇರಿ, ಸೆಸ್ಕ್, ಮದ್ದೂರು.
3) ಶ್ರೀ.ಜೇ.ಎನ್ ಪ್ರೇಮ್ ಕುಮಾರ್ : ಸಹಾಯಕ ಕಾರ್ಯನಿರ್ವಾಹಕ ಇಂಜಿನಿಯರ್(ವಿ)ನಗರ ಉ/ವಿ, ಸೆಸ್ಕ್, ಮಳವಳ್ಳಿ.
4) ಶ್ರೀಮತಿ.ಪಿ.ರಾಜೇಶ್ವರಿ : ಸಹಾಯಕ ಇಂಜಿನಿಯರ್(ಅಂ), ನಗರ ಉ/ವಿ, ಸೆಸ್ಕ್, ಮಳವಳ್ಳಿ.
5) ಶ್ರೀ.ಆರ್.ಮೋಹನ್ ರಾಜ್ : ಸಹಾಯಕ ಇಂಜಿನಿಯರ್(ವಿ),ಘಟಕ-1, ನಗರ ಉ/ವಿ,ಸೆಸ್ಕ್,ಮಳವಳ್ಳಿ.
6) ಶ್ರೀ ನಾಗೇಂದ್ರ.ಕೆ : ಸಹಾಯಕ ಇಂಜಿನಿಯರ್(ವಿ),ಘಟಕ-2, ನಗರ ಉ/ವಿ,ಸೆಸ್ಕ್,ಮಳವಳ್ಳಿ.
7) ಶ್ರೀ.ಕೆ.ಎಲ್.ಮಧುಸೂಧನ್. : ಕಿರಿಯ ಇಂಜಿನಿಯರ್(ವಿ), ಹಾಡ್ಲಿ ಶಾಖೆ, ಸೆಸ್ಕ್, ನಗರ ಉ/ವಿ.ಮಳವಳ್ಳಿ.
8) ಶ್ರೀ.ಶಿವಮಲ್ಲಯ್ಯ. : ಕಿರಿಯ ಇಂಜಿನಿಯರ್(ವಿ), ಕಾಗೇಪುರ ಶಾಖೆ, ಸೆಸ್ಕ್,ನಗರ ಉ/ವಿ.ಮಳವಳ್ಳಿ.

| ಕ್ರ. ಸಂ. | ಅರ್ಜಿದಾರರ ಹೆಸರು ಮತ್ತು ವಿಳಾಸ | ಮೊಬೈಲ್ ಸಂಖ್ಯೆ | ಅರ್ಜಿಯ ವಿಷಯ | ಸಭೆಯಲ್ಲಿ ತೆಗೆದುಕೊಂಡ ತೀರ್ಮಾನ | ಸಂಬಂಧಿಸಿದ ಅಧಿಕಾರಿ |
|---|---|---|---|---|---|
| 1 | B.S.ದೇವರಾಜು . ಬಾಣಸಮುದ್ರ | 9591932474 | ಅ)ಗ್ರಾಮದವರು ಕರ್ತವ್ಯಕ್ಕೆ ನಿಯೋಜಿಸಿರುವ ಮಾರ್ಗದಾಳು ಸರಿಯಾಗಿ ಕರ್ತವ್ಯ ನಿರ್ವಹಿಸದೆ ಬೇಜವಾಬ್ದಾರಿಯಿಂದ ವರ್ತಿಸುತ್ತಿರುತ್ತಾರೆ ಎಂದು ಲಿಖಿತ ಅರ್ಜಿ ಸಲ್ಲಿಸಿರುತ್ತಾರೆ. ಆ) ಮಳವಳ್ಳಿ ತಾಲ್ಲೂಕು ಬರಗಾಲ ಎಂದು ಘೋಷಿಸಿರುವುದರಿಂದ ಎರಡು | ಅ) ಸಾರ್ವಜನಿಕರ ಜೊತೆ ಸಭ್ಯವಾಗಿ ವ್ಯವಹರಿಸಬೇಕು ಎಂದು ಮಾರ್ಗದಾಳುಗಳಿಗೆ ಸೂಚಿಸಲು ಎಲ್ಲಾ ಶಾಖಾಧಿಕಾರಿಗಳಿಗೆ ಸೂಚಿಸಲಾಯಿತು. ಆ) ನಿರಾಕ್ಷೇಪಣಾ ಪತ್ರದಲ್ಲಿರುವಂತೆ | ಶಾಖಾಧಿಕಾರಿ, ಹಾಡ್ಲಿ ಶಾಖೆ |

SEE (Elecl) Works Circle CESC Mandya

2145 16.7.19

Scanned by CamScanner

| | | | | | |
|---|---|---|---|---|---|
| | | | ಪಂಪ್‌ಸೆಟ್‌ಗಳಿಗೆಒಂದು 25ಕೆವಿಎ ಟಿ.ಸಿ ಮತ್ತು ಕಂಬ ಹಾಗೂ ವೈರ್‌ಗಳು ಉಚಿತವಾಗಿ ಸರ್ಕಾರ ನೀಡಬೇಕು,ಇದಕ್ಕೆ ರೈತರಿಂದ ಯಾವುದೇ ಹಣ ವಸೂಲಿ ಮಾಡಬಾರದು ಎಂದು ಲಿಖಿತ ಅರ್ಜಿ ಸಲ್ಲಿಸಿರುತ್ತಾರೆ.<br>ಆ) ಸಣ್ಣಮ್ಮ ಎಂಬುವವರ ಹೆಸರಲ್ಲಿ ಆಸ್ತಿಯಿದ್ದು ಶಾಂತಮ್ಮ ಕೋಂ ಸಿದ್ದೇಗೌಡ ಬಾಣಸಮುದ್ರ ರವರ ಹೆಸರಲ್ಲಿ ವಿದ್ಯುತ್ ಸರಬರಾಜು ನೀಡಿರುತ್ತೀರಿ ಎಂದು ಆಕ್ಷೇಪಿಸಿರುತ್ತಾರೆ. | ವಿದ್ಯುತ್ ಸರಬರಾಜು ನೀಡಲಾಗಿದೆ ಎಂದು ತಿಳಿಸಿ ಶಾಖಾಧಿಕಾರಿಗಳಿಗೆ ಸ್ಥಳ ಪರಿಶೀಲನೆ ಮಾಡಿ ಕ್ರಮ ಕೈಗೊಳ್ಳಲು ಸೂಚಿಸಲಾಯಿತು. | |
| 2 | ಚಂದ್ರಶೇಖರ, ತಳಗವಾದಿ | 8453894868 | ಅ) ಒಂದು ಐಪಿ ಸೆಟ್‌ಗೆ ಒಂದು ಪರಿವರ್ತಕ ಅಳವಡಿಸಲು ಸಾದ್ಯವಿಲ್ಲವೆ ಎಂದು ಪ್ರಶ್ನಿಸಿರುತ್ತಾರೆ.<br>ಆ) ಗ್ರಾಮದಲ್ಲಿ ಪದೇ ಪದೇ ವಾಹಕ ತುಂಡಾಗುತ್ತಿರುತ್ತದೆ ಮತ್ತು ಕಾಮಗಾರಿ ಮಂಜೂರಾಗಿದ್ದರೂ ಕೆಲಸವಾಗಿರುವುದಿಲ್ಲ ಎಂದು ದೂರಿರುತ್ತಾರೆ. | ಅ) ಹಾಲಿ ಇರುವ ಪರಿವರ್ತಕ ಅಧಿಕ ಹೊರೆಯಿಂದ ಕೂಡಿದ್ದರೆ ಮತ್ತೊಂದು ಪರಿವರ್ತಕ ಅಳವಡಿಸಲು ಅವಕಾಶವಿರುತ್ತದೆ ಹಾಗೂ 11ಕೆವಿ ಮಾರ್ಗ ತುಂಬಾ ದೂರವಿದ್ದರೆ ತುರ್ತು ವಿದ್ಯುತ್ ಸರಬರಾಜು ಯೋಜನೆಯಡಿ ಪರಿವರ್ತಕ ಹೊರತು ಪಡಿಸಿ ಉಳಿದ ಸಾಮಗ್ರಿಗಳನ್ನು ಅಳವಡಿಸಿಕೊಂಡರೆ ನಿಗಮದಿಂದ ಪರಿವರ್ತಕ ಅಳವಡಿಸಲಾಗುವುದು ಎಂದು ಗ್ರಾಹಕರಿಗೆ ಮನವರಿಕೆ ಮಾಡಲಾಯಿತು.<br>ಆ)ಎಲ್.ಟಿ ಮಾರ್ಗವನ್ನು ಪರಿಶೀಲಿಸಿ ವಾಹಕ ಬದಲಾಯಿಸಲು ಅಂದಾಜು ಪಟ್ಟಿ ತಯಾರಿಸಿ ಸಲ್ಲಿಸುವಂತೆ ಶಾಖಾಧಿಕಾರಿಯವರಿಗೆ | ಶಾಖಾಧಿಕಾರಿ, ಕಾಗೇಪುರ ಶಾಖೆ |

Scanned by CamScanner

| | | | | | |
|---|---|---|---|---|---|
| | | | | ತಿಳಿಸಲಾಯಿತು. | |
| 3 | ಟಿ.ಸಿ.ಚನ್ನೇಗೌಡ , ತಳಗವಾದಿ | 8762429493 | ಅ) ಪಕ್ಕದ ರಾಮನಗರ ಜಿಲ್ಲೆಯಲ್ಲಿ ಒಂದು ಐಪಿ ಸೆಟ್‌ಗೆ ಒಂದು ಪರಿವರ್ತಕವನ್ನು ಸ್ವತಃ ನಿಗಮದವರೆ ತಂದು ಹಾಕುತ್ತಾರೆ ಆದರೆ ಇಲ್ಲಿ ಏಕೆ ಸಾದ್ಯವಿಲ್ಲ ಎಂದು ಪ್ರಶ್ನಿಸಿರುತ್ತಾರೆ.<br>ಆ) ಶನಿದೇವರ ಸಾನಿದ್ಯದಲ್ಲಿ ಒಂದು ಬೇವಿನ ಮರ ಅಡ್ಡ ಇದ್ದು ನನ್ನ ಐಪಿ ಸೆಟ್‌ಗೆ ಪರಿವರ್ತಕ ಅಳವಡಿಸುವ ಕಾಮಗಾರಿ ಪೂರ್ಣವಾಗಿರುವುದಿಲ್ಲ ಹಾಗೂ ಸದರಿ ಮರವನ್ನು ತೆಗೆಯಲು ನಿಮ್ಮ ಸಿಬ್ಬಂದಿ ನಿರಾಕರಿಸಿರುತ್ತಾರೆ ಎಂದು ದೂರಿರುತ್ತಾರೆ. | ಅ) ಸೆಸ್ಕ್ ವ್ಯಾಪ್ತಿಯಲ್ಲಿ ಎರಡು ಐಪಿ ಸೆಟ್‌ಗೆ ಪರಿವರ್ತಕದ ಯೋಜನೆಯ ಟೆಂಡರ್ ಪ್ರಕಿಯೆಯಲ್ಲಿದೆ ಎಂದು ತಿಳಿಸಲಾಯಿತು.<br>ಆ) ಸ್ಥಳ ಪರಿಶೀಲನೆ ಮಾಡಿ ಕ್ರಮ ಕೈಗೊಳ್ಳಲು ಶಾಖಾಧಿಕಾರಿಗಳಿಗೆ ಸೂಚಿಸಲಾಯಿತು. | ಶಾಖಾಧಿಕಾರಿ, ಕಾಗೇಪುರ ಶಾಖೆ |
| 4 | ಮಾಯಪ್ಪ, ಪೇಟೆ, ಮಳವಳ್ಳಿ | 9880369716 | ನನ್ನ ಮನೆಯ ಪಕ್ಕದಲ್ಲೆ ಪರಿವರ್ತಕವಿದ್ದು ಅದರಿಂದ ವಿದ್ಯುತ್ ಸರಬರಾಜು ಮಾಡಲು ಆ ಪರಿವರ್ತಕಕ್ಕೆ ಸಂಬಂಧಿಸಿದ ಗ್ರಾಹಕರು ಅಡಚಣೆ ಮಾಡಿ ಎರಡು ಕಂಬದ ಅಂತರದಿಂದ UG ಕೇಬಲ್ ಎಳೆದು ನನ್ನ ಮನೆಗೆ ವಿದ್ಯುತ್ ಸರಬರಾಜು ಮಾಡಿರುತ್ತಾರೆ ಏಕೆ ಎಂದು ಪ್ರಶ್ನಿಸಿರುತ್ತಾರೆ. | ಸದರಿ ಪರಿವರ್ತಕವು ನಿಗಮದ ಆಸ್ತಿಯಾಗಿದ್ದು ಯಾರು ಗ್ರಾಹಕರು ಮತ್ತೊಬ್ಬರಿಗೆ ವಿದ್ಯುತ್ ಸರಬರಾಜು ಮಾಡಲು ಅಡಚಣೆ ಮಾಡಬಾರದಾಗಿ ತಿಳಿಸಿ ಮತ್ತು ವೈಯ್ಯಕ್ತಿಕ ಸಮಸ್ಯೆ ಇದ್ದರೆ ತಾವೆ ಬಗೆಹರಿಸಿಕೊಳ್ಳಬೇಕೆಂದು ತಿಳಿಸಲಾಯಿತು. | ಶಾಖಾಧಿಕಾರಿ, ಓ&ಎಮ್-2 ಶಾಖೆ |
| 5 | ಕುಮಾರ ಕುಲುಮೆದೊಡ್ಡಿ | | ಮಾರ್ಗದ ಮೇಲಿರುವ ಮರಗಿಡ ತೆಗೆಯಲು ಕೆಲವು ಗ್ರಾಹಕರು ಬಿಡದೆ ವಿದ್ಯುತ್ ಮಾರ್ಗಕ್ಕೆ ತೊಂದರೆ ಹೆಚ್ಚಾಗಿದೆ ಎಂದು ದೂರಿರುತ್ತಾರೆ. | ಮಾನ್ಸೂನ್ ಕಾಲವಾದ್ದರಿಂದ ಎಲ್ಲಾ ಶಾಖಾಧಿಕಾರಿಗಳಿಗೆ ಜಂಗಲ್ ತೆಗೆಸಲು ಸೂಚಿಸಲಾಯಿತು ಹಾಗು ವಿದ್ಯುತ್ ಕಾಯ್ದೆ ನಿಯಮಾನುಸಾರ ಮಾರ್ಗದಿಂದ 2.5 ನಿಂದ 3.0ಮೀ ಗಳ ವರೆಗೆ ಜಂಗಲ್ ತೆಗೆಯಬಹುದಾಗಿರುತ್ತದೆ ಎಂದು | ಶಾಖಾಧಿಕಾರಿ, ಹಾಡ್ಲಿ ಶಾಖೆ |

Scanned by CamScanner

| | | | | | |
|---|---|---|---|---|---|
| 6 | ರಮೇಶ್ ಬಾಬು, ಪೇಟೆ ಮಳವಳ್ಳಿ | 9663996667 | ವಿದ್ಯುತ್ ಕಂಬಗಳನ್ನು ಸ್ಥಳಾಂತರಿಸಲು ಕೋರಿರುತ್ತಾರೆ. | ಸೂಕ್ತ ಕ್ರಮ ಕೈಗೊಳ್ಳಲು ಶಾಖಾಧಿಕಾರಿಗಳಿಗೆ ಸೂಚಿಸಲಾಯಿತು. | ಶಾಖಾಧಿಕಾರಿ, ಓ&ಎಮ್-2 ಶಾಖೆ |
| 7 | ಎಮ್.ಕೆ ವಿಶ್ವನಾಥ,ಕೋಟೆ, ಮಳವಳ್ಳಿ | 9449354023 | ಅ) ಖಾತೆ ವರ್ಗಾವಣೆಗೆ ಸರಳವಾದ ಮಾರ್ಗ ಮತ್ತು ಅದಕ್ಕೆ ಬೇಕಾದ ದಾಖಲಾತಿಗಳನ್ನು ಸಾರ್ವಜನಿಕರಿಗೆ ತಿಳಿಸಿಕೊಡಬೇಕೆಂದು ಕೋರಿರುತ್ತಾರೆ.<br>ಆ) ಖಾತೆ ವರ್ಗಾಯಿಸಲು ತಮ್ಮ ನಿಗಮದಿಂದ ಒಂದು ಆಂದೋಲನ ರೂಪದಲ್ಲಿ ಮಾಡಿ ಅದಕ್ಕೆ ಗಡುವು ಕೊಟ್ಟು ಸಾರ್ವಜನಿಕರಿಗೆ ಸಹಾಯ ಮಾಡಬೇಕೆಂದು.<br>ಇ) ಮಾರ್ಗಗಳಲ್ಲಿನ ಕಂಬಗಳ ಮೇಲೆ ಬಳ್ಳಿಗಳು ಬೆಳೆದಿರುವ ಬಗ್ಗೆ ಸರ್ವಿಸ್ ಸ್ಟೇಷನ್ ಗೆ ಕರೆ ಮಾಡಿದಾಗ ಅಸಭ್ಯ ಮಾತುಗಾರಿಕೆಯಿಂದ ವರ್ತಿಸುತ್ತಾರೆ ಎಂದು ಆಕ್ಷೇಪಿಸಿರುತ್ತಾರೆ. | ಅ) ಮೇಲಾಧಿಕಾರಿಗಳಿಗೆ ತಿಳಿಸಿ ಸೂಕ್ತ ಕ್ರಮ ಕೈಗೊಳ್ಳಲಾಗುವುದೆಂದು ತಿಳಿಸಲಾಯಿತು.<br>ಆ) ಖಾತೆ ವರ್ಗಾಯಿಸಲು ನಮ್ಮ ನಿಗಮದಿಂದ ಒಂದು ಆಂದೋಲನ ಮಾಡಲು ನಮ್ಮ ಮೇಲಾಧಿಕಾರಿಗಳ ಗಮನಕ್ಕೆ ತಂದು ಮುಂದಿನ ಕ್ರಮ ಕೈಗೊಳ್ಳಲಾಗುವುದು ಎಂದು ತಿಳಿಸಲಾಯಿತು.<br>ಇ) ಸಾರ್ವಜನಿಕರ ಜೊತೆ ಸಭ್ಯವಾಗಿ ವ್ಯವಹರಿಸಬೇಕು ಎಂದು ಸಿಬ್ಬಂದಿಗಳಿಗೆ ಸೂಚಿಸಲು ಎಲ್ಲಾ ಶಾಖಾಧಿಕಾರಿಗಳಿಗೆ ಸೂಚಿಸಲಾಯಿತು. | ಶಾಖಾಧಿಕಾರಿ, ಓ&ಎಮ್-1ಶಾಖೆ |
| 8 | ಶಿವು, ಹಂದಿಹಳ್ಳ | 9972774793 | ರಾತ್ರಿ ಸಮಯದಲ್ಲಿ ವಿದ್ಯುತ್ ಸರಬರಾಜು ಇರುವುದಿಲ್ಲ. | ಮೂರು ದಿನಗಳಿಂದ ಅತಿಯಾದ ಮಳೆಗಾಳಿಯಿಂದ ಮಾರ್ಗ ತೊಂದರೆಯಿಂದ ವಿದ್ಯುತ್ ವ್ಯತ್ಯಯ ಆಗಿದೆ ಎಂದು ಶಾಖಾಧಿಕಾರಿಗಳು ತಿಳಿಸಲಾಗಿ ಜಂಗಲ್ ತೆಗೆಸಲು ಮಾರ್ಗ ಸರಿಪಡಿಸಿಕೊಳ್ಳಲು ಶಾಖಾಧಿಕಾರಿಗಳಿಗೆ ಸೂಚಿಸಲಾಯಿತು. | ಶಾಖಾಧಿಕಾರಿ, ಓ&ಎಮ್-1 ಶಾಖೆ |

Scanned by CamScanner

| | | | | | |
|---|---|---|---|---|---|
| 9 | ತಮ್ಮೇಗೌಡ, ಮಾದಹಳ್ಳಿ | 9741103934 | ಗ್ರಾಮದ 63ಕೆವಿಎ ಪರಿವರ್ತಕ ವಿಫಲವಾಗಿದ್ದು ಬದಲಾಯಿಸಲು ಕೋರಿರುತ್ತಾರೆ. | ಜೇಷ್ಠತಾ ಪಟ್ಟಿಯ ಮೇರೆಗೆ ಬದಲಾಯಿಸುವುದಾಗಿ ತಿಳಿಸಲಾಯಿತು. | ಶಾಖಾಧಿಕಾರಿ, ಕಾಗೇಪುರ ಶಾಖೆ |

ಸಹಾಯಕ ಕಾರ್ಯನಿರ್ವಾಹಕ ಇಂಜಿನಿಯರ್(ವಿ),
ಸೆಸ್ಕ್, ನಗರ ಉಪವಿಭಾಗ, ಮಳವಳ್ಳಿ.

**ಪ್ರತಿಗಳನ್ನು :-**

1) ಪ್ರಧಾನ ವ್ಯವಸ್ಥಾಪಕರು (ತಾಂತ್ರಿಕ), ನಿಗಮ ಕಛೇರಿ, ಸೆಸ್ಕ್, ಮೈಸೂರು ರವರ ದಿವ್ಯ ಅವಗಾಹನಗಾಗಿ.
2) ಪ್ರಧಾನ ವ್ಯವಸ್ಥಾಪಕರು(ಆ ಮತ್ತು ಮಾ.ಸಂ.) ನಿಗಮ ಕಛೇರಿ, ಸೆಸ್ಕ್, ಮೈಸೂರು ರವರ ದಿವ್ಯ ಅವಗಾಹನಗಾಗಿ
3) ಮುಖ್ಯ ಇಂಜಿನಿಯರ್(ವಿ), ಸೆಸ್ಕ್, ವಲಯ ಕಛೇರಿ, ಮೈಸೂರು ರವರ ಅವಗಾಹನೆಗಾಗಿ.
4) ಅಧೀಕ್ಷಕ ಇಂಜಿನಿಯರ್(ವಿ), ಸೆಸ್ಕ್, ಮಂಡ್ಯ ವೃತ್ತ, ರವರ ಅವಗಾಹನೆಗಾಗಿ.
5) ಕಾರ್ಯನಿರ್ವಾಹಕ ಇಂಜಿನಿಯರ್(ವಿ), ಸೆಸ್ಕ್, ಮದ್ದೂರು ವಿಭಾಗ, ರವರ ಅವಗಾಹನೆಗಾಗಿ.
6) ಸಹಾಯಕ ಇಂಜಿನಿಯರ್(ತಾಂ),ಸೆಸ್ಕ್, ನಗರ ಉ/ವಿ, ಮಳವಳ್ಳಿ ರವರ ಮಾಹಿತಿಗಾಗಿ.
7) ಸಹಾಯಕ ಇಂಜಿನಿಯರ್(ವಿ), ಘಟಕ-1 ಮತ್ತು 2, ಶಾಖಾಧಿಕಾರಿ, ಹಾಡ್ಲಿ ಮತ್ತು ಕಾಗೇಪುರ ರವರ ಮಾಹಿತಿಗಾಗಿ, ಸಲ್ಲಿಸುತ್ತ ತಮ್ಮ ಶಾಖಾ ವ್ಯಾಪ್ತಿಯ ಕುಂದು ಕೊರತೆಗಳ ಬಗ್ಗೆ ಸಭೆಯಲ್ಲಿ ನಿಗದಿ ಮಾಡಿರುವ ದಿನಾಂಕದೊಳಗೆ ಬಗೆ ಹರಿಸಲು ಸೂಚಿಸಲಾಗಿದೆ.
8) ಕಡತ.

Scanned by CamScanner